ವಿಚಾರದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಪಂಚಯ್ಯಸ್ವಾಮಿಗಳು ಪೀಠಾಧಿಕಾರಿಗಳಾಗಿ ಬಂದ ಮೇಲೆ ಮಠವನ್ನು ಬೆಳೆಸಲು ಇನ್ನಿಲ್ಲದಂಗೆ ಶ್ರಮಿಸಿದ್ದರು. ಅವರೊಳಗಿನ ಮಹತ್ವಾಕಾಂಕ್ಷೆ, ಶ್ರದ್ಧೆ, ಶ್ರಮ ಮತ್ತು ನಿರಂತರವಾದ ಪ್ರಯತ್ನದಿಂದಾಗಿ ವಿರಕ್ತ ಮಠವನ್ನು ಉಚ್ಛ್ರಾಯ ಸ್ಥಿತಿಗೆ ತಂದು ನಿಲ್ಲಿಸಿದ್ದರು. ಅವರು ಸದಾ ನಗುಮೊಗದಿಂದ ಜನರನ್ನು ಮಾತನಾಡಿಸುತ್ತ ಅವರೊಂದಿಗೆ ಬೆರೆಯುತ್ತಿದ್ದ ಕಾರಣವಾಗಿ ಮಠಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಅದರಲ್ಲೂ ಪ್ರತೀ ಸೋಮವಾರದಂದು ಊರ ಜನರು ತಂಡೋಪತಂಡವಾಗಿ ವಿರಕ್ತ ಮಠಕ್ಕೆ ಬಂದು ಗಂಗಾಧರಯ್ಯಸ್ವಾಮಿಗಳ ಗದ್ದುಗೆಗೆ ನಮಸ್ಕರಿಸಿ, ಮಠದ ಆವರಣದಲ್ಲಿರುವ ಆಲದ ಗಿಡದ ಕೆಳಗೆ ಗಳಿಗೊತ್ತು ಕುಂತು ಹೋಗುವುದನ್ನು ರೂಢಿಯಾಗಿಸಿಕೊಂಡಿದ್ದರು. ಅಲ್ಲದೇ, ಆಗಾಗ ವಿಶೇಷ ದಿನಗಳಲ್ಲಿ ಪಂಚಯ್ಯಸ್ವಾಮಿಗಳು ಮಠದಲ್ಲಿ ಪುರಾಣ ಪ್ರವಚನಗಳನ್ನು ಹೇಳುತ್ತಿದ್ದರು. ಅಧ್ಯಾತ್ಮದ ಬಗ್ಗೆ ಅವರಿಗಿರುವ ಅಪಾರವಾದ ಜ್ಞಾನ, ಬಸವಾದಿ ಪ್ರಮಥರ ವಿಚಾರಧಾರೆಗಳನ್ನು ವರ್ತಮಾನಕ್ಕೆ ಪೂರಕವಾಗಿ ಪುರಾಣ ಪ್ರವಚನಗಳ ಮೂಲಕ ಜನರಿಗೆ ತಿಳಿಯುವಂತೆ ಅತ್ಯಾಕರ್ಷಕವಾಗಿ ಹೇಳುತ್ತಿದ್ದರಾದ್ದರಿಂದ ಅಂಥ ಕಾರ್ಯಕ್ರಮಗಳಲ್ಲಿ ಊರ ಜನರು ತಪ್ಪದೇ ಸೇರುತ್ತಿದ್ದರು. ಅದರಲ್ಲೂ ದಸರಾ ಹಬ್ಬದ ಸಂದರ್ಭದಲ್ಲಿ ನಾಡಿನ ಹೆಸರಾಂತ ಮಠಗಳ ಮಠಾಧೀಶರನ್ನು ಕರೆಸಿ ಅವರಿಂದ ಐದು ದಿನಗಳ ವರೆಗೆ ಬೆಳಿಗ್ಗೆ - ಸಂಜೆ ಮಠದಲ್ಲಿ ಎರಡೂ ಹೊತ್ತು ಪುರಾಣ ಪ್ರವಚನಗಳನ್ನು ಹೇಳಿಸುತ್ತಿದ್ದರು. ಆ ಸಂದರ್ಭದಲ್ಲಿ ಅಧ್ಯಾತ್ಮದ ಸವಿಯನ್ನು ಉಣ್ಣಲು ಬರುವ ಭಕ್ತರಿಗೆ ಅನ್ನಸಂತರ್ಪಣೆಯ ವ್ಯವಸ್ಥೆಯನ್ನು ಮಠದಲ್ಲಿ ಮಾಡಲಾಗುತ್ತಿತ್ತು. ಈ ಕಾರ್ಯಕ್ರಮಕ್ಕೆ ಹಾರೀಗೇರಿ ಊರಿನ ಜನರಷ್ಟೇ ಅಲ್ಲದೇ ಅಕ್ಕಪಕ್ಕದ ಹಳ್ಳಿಗಳ ಜನರೂ ಸಹ ಆಗಮಿಸುತ್ತಿದ್ದರು. ಹೀಗೆ, ಯಾವುದೇ ಜಾತಿ, ಮತ ಪಂಥಗಳ ಬೇಧವಿಲ್ಲದೆ ಐದು ದಿನಗಳ ವರೆಗೆ ನಡೆಯುತ್ತಿದ್ದ ಈ ಕಾರ್ಯಕ್ರಮವು ವಿರಕ್ತ ಮಠದ ಜಾತ್ರಾ ಮಹೋತ್ಸವವೆಂದೇ ಹೆಸರಾಗಿತ್ತು. ಈ ಜಾತ್ರಾ ಮಹೋತ್ಸವದ ತಯಾರಿ ದಸರಾ ಹಬ್ಬಕ್ಕಿಂತ ಮೂರು ನಾಕು ತಿಂಗಳುಗಳ ಮುಂಚೆಯೇ ನಡೆಯುತ್ತಿತ್ತು.

ಈ ತೆರನಾಗಿ ಪಂಚಯ್ಯಸ್ವಾಮಿಗಳ ನೇತೃತ್ವದಲ್ಲಿ ವಿರಕ್ತ ಮಠವು ದಿನದಿಂದ ದಿನಕ್ಕೆ ಬೆಳೆಯುತ್ತ ಹೋಗಲು ಮಠಕ್ಕೆ ನಡೆದುಕೊಳ್ಳುವ ಭಕ್ತರ ಸಂಖ್ಯೆಯೂ ಹೆಚ್ಚಾಗತೊಡಗಿತು. ಇದರಿಂದಾಗಿ ಮಠವು ಕೇವಲ ಅಧ್ಯಾತ್ಮದ ಅಡುಗೆಯನ್ನು ಉಣ್ಣಿಸುವ ಕೇಂದ್ರವಾಗಿ ಉಳಿಯದೇ ರಾಜಕಾರಣಿಗಳ ಪಾಲಿನ ವೋಟ್ ಬ್ಯಾಂಕ್ ಆಗಿ ಅವರ ಕಣ್ಣು ಕುಕ್ಕತೊಡಗಿತು. ಆದರೆ ಇದೇ ಪಂಚಯ್ಯಸ್ವಾಮಿಗಳಿಗೆ ಮಗ್ಗುಲು ಮುಳ್ಳಾಗಿ ಪರಿಣಮಿಸಿತು!

* * *

ಯಾವಾಗ ವಿರಕ್ತ ಮಠಕ್ಕೆ ನಡೆದುಕೊಳ್ಳುವ ಭಕ್ತರ ಸಂಖ್ಯೆ ಹೆಚ್ಚಾಗಿ, ಅಧ್ಯಾತ್ಮದ ವಿಷಯದಲ್ಲಿ ಅಗಾಧವಾದ ಪಾಂಡಿತ್ಯವನ್ನು ಹೊಂದಿದ್ದ ಪಂಚಯ್ಯಸ್ವಾಮಿಗಳ ಮೇಲೆ ಅವರ ನಂಬಿಕೆ ಬಲವಾಗತೊಡಗಿತೊ ಆಗಲೇ ಆಡಳಿತಾರೂಢ ಪಕ್ಷದಲ್ಲಿ ಈ ಕ್ಷೇತ್ರದ ಎಂಎಲ್‌ಎ ಆಗಿದ್ದ ಶರಣಪ್ಪನ ಕಣ್ಣು ವಿರಕ್ತ ಮಠದ ಮೇಲೆ ಬಿತ್ತು! ಅದಾಗಲೇ ಸುತ್ತ ಮುತ್ತಲಿನ ಹತ್ತಾರು ಹಳ್ಳಿಗಳ ಜನರು ಆರಾಧಿಸುವ ಪುಣ್ಯ ಪೀಠವಾಗಿ ರೂಪುಗೊಂಡಿದ್ದ ಈ ಮಠದ ಪೀಠಾಧಿಪತಿಗಳಾದ ಪಂಚಯ್ಯಸ್ವಾಮಿಗಳ ಮಾತನ್ನು ಸಮಸ್ತ ಭಕ್ತರು ಎಂದಿಗೂ ತೆಗೆದು ಹಾಕುವುದಿಲ್ಲ ಎಂಬುದು ಆತನಿಗೆ ಮನದಟ್ಟಾಗಿತ್ತು. ಅದಕ್ಕೇ, ವಿರಕ್ತ ಮಠಕ್ಕೆ ನಡೆದುಕೊಳ್ಳುವ ಸಮಸ್ತ ಭಕ್ತರ ಮತಗಳ ಮೇಲೆ ಕಣ್ಣು ಹಾಕಿದ ಶರಣಪ್ಪ, ಈ ಮಠದೊಂದಿಗೆ ನಿರಂತರವಾದ ಸಂಪರ್ಕವನ್ನಿಟ್ಟುಕೊಳ್ಳುವುದರ ಮೂಲಕ ಪಂಚಯ್ಯಸ್ವಾಮಿಗಳಿಗೆ ಹತ್ತಿರವಾಗಬೇಕೆಂಬ ದೂರಾಲೋಚನೆ ಮಾಡಿದ. ಅದರಂತೆ ತಿಂಗಳಲ್ಲಿ ಎರಡ್ಮೂರು ಸಲ ವಿರಕ್ತ ಮಠಕ್ಕೆ ಭೇಟ್ಟಿ ಕೊಟ್ಟು; ಗಂಗಾಧರಯ್ಯಸ್ವಾಮಿಗಳ ಗದ್ದುಗೆಗೆ ನಮಸ್ಕರಿಸಿ, ಮಠದ ಆವರಣದಲ್ಲಿಯೇ ಇದ್ದುಕೊಂಡು ಭಕ್ತರೊಂದಿಗೆ ಸಮಾಲೋಚನೆಯಲ್ಲಿ ತೊಡಗಿರುತ್ತಿದ್ದ ಪಂಚಯ್ಯಸ್ವಾಮಿಗಳೊಂದಿಗೆ ಗಳಿಗೊತ್ತು ಕುಂತು ಮಠದ ಅಭಿವೃದ್ಧಿಯ ವಿಚಾರವನ್ನು ಚರ್ಚಿಸಿ ಹೋಗುವುದನ್ನು ರೂಢಿಸಿಕೊಂಡ. ಜೊತೆಗೆ ಆಗಾಗ ಮಠದಲ್ಲಿ ಜರುಗುತ್ತಿದ್ದ ಅಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಠದೊಂದಿಗೆ ತನ್ನ ಅಸ್ತಿತ್ವವನ್ನು